ದಕ್ಷಿಣ ಕನ್ನಡ ಜಿಲ್ಲೆಯ ವೆನ್‌ಲಾಕ್ ಹಗೂ ಲೇಡಿಗೋಷನ್ ಆಸ್ಪತ್ರೆಗಳ ಅಭಿವೃದ್ಧಿ

2064(2184) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ವೆನ್‌ಲಾಕ್ ಹಾಗೂ ಲೇಡಿಗೋಷನ್ ಆಸ್ಪತ್ರೆಗಳನ್ನು ಅಭಿವೃದ್ಧಿಗೊಳಿಸಲು ಹೊಸ ಮನವಿಗಳು ಬಂದಿದೆಯೇ;

ಆ) ಅವುಗಳನ್ನು ಕಾರ್ಯರೂಪಕ್ಕೆ ತರಲು ಒಪೆಕ್ ಅಥವಾ ಇತರೇ ಯಾವ ಸಂಸ್ಥೆಗಳಿಂದ ಹಣವನ್ನು ಒದಗಿಸಲು ಕ್ರಮ ಕೈಗೊಳ್ಳಬಹುದು;

ಇ) ಕ್ಲಿನಿಕಲ್ ಫೀಸ್‌ನ ಬಳಕೆಗೆ ಸಂಬಂಧಪಟ್ಟ ಯಾವ ಕ್ರಿಯಾಯೋಜನೆ ಸರ್ಕಾರದ ಮುಂದೆ ಇದೆ; ಈಗಾಗಲೇ ಸರ್ಕಾರದ ಮುಂದೆ ಆಸ್ಪತ್ರೆಗೆ ಸಂಬಂಧಪಟ್ಟ ಯಾವ ಪ್ರಸ್ತಾವನೆಗಳು ಇವೆ; ಎಷ್ಟು ಸಮಯದಿಂದ ಬಾಕಿ ಇವೆ; ಯಾವಾಗ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು?

ಡಾ।। ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು):

ಅ) ವೆನ್‌ಲಾಕ್ ಆಸ್ಪತ್ರೆಯ ಕೃತಕ ಅವಯವದ ಜೋಡಣಾ ಕೇಂದ್ರ ಮೇಲಂತಸ್ತಿನಲ್ಲಿ ಕೇಂದ್ರಿಕೃತ ಅಪಘಾತ ಗಾಯಾಳುಗಳ ಚಿಕಿತ್ಸಾ ಕೇಂದ್ರ ನಿರ್ಮಾಣ ಮಾತ್ರ ಸ್ವೀಕೃತವಾಗಿತ್ತು. ದಿನಾಂಕ: 15-3-2003 ರಂದು ಮಂಜೂರಾತಿ ನೀಡಲಾಗಿದೆ.

ಆ) ಸರ್ಕಾರದ ಅನುದಾನದಿಂದ ಹಾಗೂ ಅನುಬೋಗ ಶುಲ್ಕದಿಂದ ಹಣ ಒದಗಿಸಲಾಗುವುದು.

ಇ) ಈಗ ಯಾವುದೇ ಪ್ರಸ್ತಾವನೆ ಬಾಕಿ ಇಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಗ್ರಂಥಾಲಯಗಳ ಅಭಿವೃದ್ಧಿ

2065(2437) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಗ್ರಂಥಾಲಯಗಳಲ್ಲಿ ಖರೀದಿಸಿದ ಪುಸ್ತಕಗಳು, ಸರಬರಾಜಾದ ಪುಸ್ತಕಗಳು ಎಷ್ಟು; (ವಾರ್ಷಿಕವಾಗಿ ಪ್ರತಿ ಗ್ರಂಥಾಲಯಗಳ ವಿವರ ಕೊಡುವುದು);

ಆ) ಗ್ರಂಥಾಲಯ ಕಟ್ಟಡಗಳ ದುರಸ್ತಿಗೆ ಎಷ್ಟು ಅನುದ್ಹಾನ ಬಿಡುಗಡೆ ಮಾಡಲಾಗಿದೆ; (ಪ್ರತ್ಯೇಕ ವಿವರ ಕೊಡುವುದು) ;

ಇ) ಮಾಹಿತಿ ತಂತ್ರಜ್ಞಾನ ಹಾಗೂ ಇಂಟರ್‌ನೆಟ್ ಗ್ರಂಥಾಲಯ ಅಭಿವೃದ್ಧಿಗೊಳಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಬಾಬುರಾವ್ ಚವ್ಹಾಣ (ವಯಸ್ಕರ ಶಿಕ್ಷಣ, ಗ್ರಂಥಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಗ್ರಂಥಾಲಯಗಳಲ್ಲಿ 1,03,465 ಪುಸ್ತಕವಗಳನ್ನು ಖರೀದಿಸಿ ಸರಬರಾಜು ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.